# ಮೊಬೈಲ್ ಗುಮ್ಮನ ಕರೆಯದಿರೆ, ಅಮ್ಮಾ...

**ಪುಟ್ಟ ಮಕ್ಕಳನ್ನು ರಮಿಸಿ, ಒಲ್ಲೈಸಿ ಊಟ ಮಾಡಿಸುವ ಗೋಜಿಗೆ ಹೋಗದ ಅಮ್ಮಂದಿರು ಅವರ ಕೈಗೆ ಮೊಬೈಲ್ ಕೊಟ್ಟು ನಿರಾಳರಾಗುತ್ತಿದ್ದಾರೆ. ಪ್ರಪಂಚವನ್ನು ಬೆರಗಿನಿಂದ ನೋಡಬೇಕಾದ ಪುಟಾಣಿ ಕಂಗಳಿಗೆ ಮೊಬೈಲ್ ಪರದೆ ಎಳೆಯುತ್ತಿದ್ದಾರೆ.**

**■ ಸವಿತಾ ಮಾಧವ ಶಾಸ್ತ್ರಿ, ಗುಂಡ್ಮಿ**



ಒಂದು ಮದುವೆ ಸಮಾರಂಭಕ್ಕೆ ಹೋಗಿದ್ದೆ. ನನ್ನ ಪಕ್ಕದಲ್ಲಿ ಒಬ್ಬ ತಾಯಿ ತನ್ನ ಎರಡು–ಮೂರು ವರ್ಷದ ಮಗುವಿನೊಂದಿಗೆ ಕೂತಿದ್ದರು. ಇನ್ನೇನು ಊಟ ಪ್ರಾರಂಭವಾಗುತ್ತದೆ ಎನ್ನುವಾಗ ಆಕೆ ಮೊದಲು ಮಾಡಿದ ಕೆಲಸವೆಂದರೆ, ತನ್ನ ವ್ಯಾನಿಟಿ ಬ್ಯಾಗ್‌ನಿಂದ ಮೊಬೈಲ್ ತೆಗೆದು ತನ್ನ ಮಗನಿಗೆ ಕೊಟ್ಟಿದ್ದು. ಯೂಟ್ಯೂಬ್‌ನಲ್ಲಿ ಅದಾವುದೋ ಕಾರ್ಟೂನ್ ವಿಡಿಯೊ ಒಂದನ್ನು ಹಾಕಿಕೊಟ್ಟರು. ಆ ಮಗು ಆ ವಿಡಿಯೊ ಆನಂದಿಸುತ್ತಾ ಇದ್ದರೆ, ತಾಯಿ ಅದರ ಬಾಯಿಗೆ ಅನ್ನ ಸಾರು ಕಲಸಿ ಹಾಕುತ್ತಾ ಹೋದರು.

ಮಗು ತಾನು ಏನು ಉಣ್ಣುತ್ತಿದ್ದೇನೆ ಎಂದು ಒಂದು ಸಲವೂ ನೋಡದೆ ಊಟದ ತುತ್ತನ್ನು ಮೆಲ್ಲುತ್ತಾ ಹೋಯಿತು. ಅದರ ಗಮನ ಪೂರ್ತಿಯಾಗಿ ಆ ವಿಡಿಯೊ ಮೇಲೆ ಇತ್ತು. ಹೀಗೆ ಮಗುವಿಗೆ ಒಂದಷ್ಟು ತುತ್ತು ಉಣ್ಣಿಸಿ ನಂತರ ಆಕೆ ತಾನು ಉಣ್ಣತೊಡಗಿದರು. ಆಕೆ ಮಗುವಿನ ಕೈಯಿಂದ ಮೊಬೈಲ್ ಕಸಿಯಲು ಹೋದರೆ ಮಗು ಮೊಬೈಲ್ ಕೊಡದೆ ಹಟ ಮಾಡತೊಡಗಿತು. ಕೊನೆಗೆ ಅದರ ಹಟದ ಮುಂದೆ ಆಕೆ ಸೋಲಲೇಬೇಕಾಯಿತು.

‘ಮನೇಲೂ ನೀವು ಮೊಬೈಲ್ ಕೊಟ್ಟೇ ಊಟ ಮಾಡಿಸ್ತೀರಾ?’ ಎಂದು ನಾನು ಕುತೂಹಲ ತಡೆಯದೆ ಕೇಳಿದೆ.

ಆಕೆ ‘ಹೌದು ಅಕ್ಕ, ಏನು ಮಾಡೋದು ಹೇಳಿ? ಮೊಬೈಲ್ ಇಲ್ಲದಿದ್ದರೆ ನನ್ನ ಮಗ ಊಟಾನೇ ಮಾಡೋದಿಲ್ಲ’ ಎಂದರು.

ಈಗ ಎಲ್ಲಿ ಹೋದರೂ ಚಿಕ್ಕವರು, ದೊಡ್ಡವರು ಎನ್ನದೆ ಎಲ್ಲರ ಕೈಯಲ್ಲೂ ಮೊಬೈಲ್ ಎಂಬ ಮಾಯಾವಿ ನಲಿದಾಡುತ್ತಿರುತ್ತದೆ. ಅದೀಗ ಸರ್ವೇಸಾಮಾನ್ಯ ವಿಷಯ.

ಮೊನ್ನೆ ಮೊನ್ನೆ ಯಾವುದೋ ನೆಂಟರ ಮನೆಗೆ ಹೋದಾಗ ನನ್ನ ದೂರದ ಸಂಬಂಧಿ